ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

(ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ 544 ನ್ಯಾಯಬೆಲೆ ಅಂಗಡಿಗಳಿವೆ. 4,31,571 ಬಿಪಿಎಲ್ ಮತ್ತು 1,18,392 ಎಪಿಎಲ್ ಪಡಿತರ ಚೀಟಿ ಗಳಿರುತ್ತವೆ.

(ಆ) ಸರ್ಕಾರದ ಮಾನದಂಡಗಳನ್ವಯ ಬಿಪಿಎಲ್ ಪಡಿತರ ಚೀಟಿದಾರರಲ್ಲಿ 1, 2 ಮತ್ತು 3 ಘಟಕದ ಪಡಿತರ ಚೀಟಿದಾರರಿಗೆ ಕ್ರಮವಾಗಿ 8–16–24 ಕೆಜಿ ಅಕ್ಕಿಯಂತರ ಹಾಗೂ ಕ್ರಮವಾಗಿ 2–4–6 ಕೆ.ಜಿ ಗೋಧಿ ಯಂತೆ ಆಯಾ ಮಾಹೆವಾರು ವ್ಯತ್ಯಾಸ ಹೊಂದುವ ಪಡಿತರ ಚೀಟಿಗಳ ಅನುಗುಣವಾಗಿ ಆಹಾರ ಧಾನ್ಯಗಳ ಹಂಚಿಕೆ ಮಾಡಲಾಗುತ್ತದೆ.

ಪ್ರಸ್ತುತ ಜೂನ್ 2014ರ ಮಾಹೆಗೆ ಒಟ್ಟು 3 ಘಟಕದ ಪಡಿತರ ಚೀಟಿ ವಾರು 431571 ಪಡಿತರ ಚೀಟಿಗಳಿಗೆ 122.360 ಮೆ.ಟನ್ ಅಕ್ಕಿಯನ್ನು ಮಾತ್ರ ಹಂಚಿಕೆ ಮಾಡಲಾಗಿದೆ. ಸದರಿ ಮಾಹೆಯಲ್ಲಿ ಗೋಧಿ ಹಂಚಿಕೆ ಇಲ್ಲದ ಕಾರಣ ಗೋಧಿಯ ಬದಲಾಗಿ ಅಕ್ಕಿಯನ್ನು ಹಂಚಿಕೆ ನೀಡಲಾಗಿದೆ.

1500 ಕೆ. ಎಲ್. ಸೀಮೆಎಣ್ಣೆಯನ್ನು ಪ್ರಸ್ತುತ ಬೆಂಗಳೂರು ನಗರ ಜಿಲ್ಲೆಗೆ ಹಂಚಿಕೆ ನೀಡಲಾಗಿರುತ್ತದೆ. ಅಡಿಗೆ ಎಣ್ಣೆ ಪಡಿತರ ವಿತರಣೆ ಯಲ್ಲಿ ಇರುವುದಿಲ್ಲ.

(ಇ) ಕಳೆದ ಒಂದು ವರ್ಷದಲ್ಲಿ 67.87 ಕೋಟಿ ಹಣ ವೆಚ್ಚ ಮಾಡಲಾಗಿದೆ. ಏಪ್ರಿಲ್ 2013 ರಿಂದ ಮಾರ್ಚ 2014ರ ವರೆಗೆ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದ ಬಿಪಿಎಲ್ ಪಡಿತರ ಚೀಟಿಗಳಿಗೆ 1036.206 ಮೆ. ಟನ್ ಅಕ್ಕಿ ಹಾಗೂ 112.506 ಮೆ.ಟನ್ ಗೋಧಿಯನ್ನು ಹಂಚಿಕೆ ನೀಡಲಾಗಿದೆ.

(ಈ) ಇದೇ ಅವಧಿಯಲ್ಲಿ ಕಡಿಮೆಯಾಗಿರುವ ಅಥವಾ ವ್ಯಪಗತವಾಗಿರುವ ಆಹಾರ ಪದಾರ್ಥಗಳು ಯಾವುದು ಇರುವುದಿಲ್ಲ.

ತಾಂಡಾಗಳ ಅಭಿವೃದ್ಧಿ

796 (1470); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

(ಅ) 2013–14ನೇ ಸಾಲಿನಲ್ಲಿ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದ ವತಿಯಿಂದ ಯಾವ ಮಾನದಂಡದ ಮೇಲೆ ಅನುದಾನದ ಬಿಡುಗಡೆ ಮಾಡಲಾಗಿದೆ;

(ಆ) ಡಾ: ಡಿ. ಎಂ. ನಂಜುಂಡಪ್ಪ ವರದಿಯ ಅನ್ವಯ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ತಾಂಡಾ ಅಭಿವೃದ್ಧಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) 2013–14ನೇ ಸಾಲಿನಲ್ಲಿ ಲಿಂಗಸುಗೂರು ಕ್ಷೇತ್ರ ವ್ಯಾಪ್ತಿಯ ಯಾವ ಯಾವ ತಾಂಡಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಲಾಗಿದೆ? (ವಿವರ ನೀಡುವುದು)

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

(ಅ) ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು 2013–14ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವಾಗ 5000ಕ್ಕಿಂತ ಅಧಿಕ ಜನಸಂಖ್ಯೆಯುಳ್ಳ ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ.

5000ಕ್ಕಿಂತ, ಕಡಿಮೆ ಜನಸಂಖ್ಯೆಯುಳ್ಳ ವಿಧಾನಸಭಾ ಕ್ಷೇತ್ರಗಳಿಗೆ ಕಾಮಗಾರಿಗಳ ತುರ್ತು ಅಗತ್ಯತೆ ಪರಿಶೀಲಿಸಿ ಮಂಡಳಿ / ಅಧ್ಯಕ್ಷರ ವಿವೇಚನಾ ನಿಧಿಯಿಂದ ಅನುದಾನದ ಬಿಡುಗಡೆಗೆ ಕ್ರಮವಹಿಸಲಾಗಿದೆ.

ನಿಗಮವು ಅನುಷ್ಠಾನಗೊಳಿಸುತ್ತಿರುವ ಇತರೆ ಯೋಜನೆಗಳಿಗೆ ಬೇಡಿಕೆ ಮತ್ತು ಅರ್ಹತೆಯನ್ನಾಧಿರಿಸಿ ಅನುದಾನ ನೀಡಲಾಗಿದೆ.

(ಆ) ಡಾ॥ ಡಿ. ಎಂ. ನಂಜುಂಡಪ್ಪ ವರದಿಗೆ ಅನುಗುಣವಾಗಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿರುವುದಿಲ್ಲ ಆದರೆ ಬಹುಪಾಲು ತಾಂಡಾಗಳು ಡಾ. ಡಿ. ಎಂ. ನಂಜುಂಡಪ್ಪ ವರದಿಯಲ್ಲಿ ತಿಳಿಸಲಾದ ಹಿಂದುಳಿದ ಮತ್ತು ಅತೀ ಹಿಂದುಳಿದ ತಾಲ್ಲೂಕುಗಳ ವ್ಯಾಪ್ತಿಯಲ್ಲಿಯೇ ಬರುವುದರಿಂದ ಸರ್ಕಾರದಿಂದ ನಿಗಮಕ್ಕೆ ನೀಡುವ ಅನುದಾನದಿಂದ ಆಯಾ ತಾಲ್ಲೂಕು / ವಿಧಾನಸಭಾ ಜನಸಂಖ್ಯೆಯ ಆಧಾರದ ಮೇಲೆ ಅನುಧಾನ ನಿಗದಿಪಡಿಸಿ ಯೋಜನೆಗಳ ಅನುಷ್ಟಾನವನ್ನು ಕೈಗೊಳ್ಳಲಾಗಿದೆ.

(ಇ) ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.

ಮಾನ್ಯ ವಿ. ಸಭೆ ಸದಸ್ಯರಾದ ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1470ಕ್ಕೆ ಅನುಬಂಧ–1

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತದಿಂದ 2013–14ನೇ ಸಾಲಿನಲ್ಲಿ ಲಿಂಗಸುಗೂರು ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡಲಾಗಿ ರುವ ವಿವರ

ಕ್ರ. ಸಂ.	ಕಾಮಗಾರಿ ಹೆಸರು	ತಾಂಡಾಗಳ ಹೆಸರು	ಅಂದಾಜು ವೆಚ್ಚ	ಮುಂಗಡ ಬಿಡುಗಡೆ ಮಾಡಲಾದ ಅನುದಾನ
1	ಮೂಲಭೂತ ಸೌಕರ್ಯ	ಗೋರೆಬಾಳ ತಾಂಡಾ	5.00	2.50
2		ಕರಡಕಲ್ ತಾಂಡಾ	5.00	2.50
3		ಬಗಡಿ ತಾಂಡಾ	5.00	2.50